



### ಎಡದಿಂದ ಬಲಕ್ಕೆ

1. ಸಂಪತ್ತು ಸಾಲದೆಂದು ಆತನಿಗೆ ಸದಾ ದುಃಖ 3
3. ಸಾರಿಗೆಸಂಪರ್ಕದ ಅನುಕೂಲಕ್ಕೆಂದು ಹೀಗೆ ಬೆಟ್ಟವನ್ನೇ ಕೊರೆದ ಹಾದಿ 3
4. ತಾಕತ್ತಿನ ಪ್ರದರ್ಶನ ಮಾಡಲೇಬೇಕೆಂದು ಒತ್ತಾಯ 3
6. ಸಭೆ ಸೇರಿಸು; ಸಮಸ್ಯೆಗೆ ಪರಿಹಾರವನ್ನು ಸರಳಗೊಳಿಸು 4
7. ಮೂಗುತಿಯನ್ನು ಕದ್ದು ಎಲ್ಲರಿಗೂ ತೋರಿಸಿದ್ದು ಕಪಿ ಬುದ್ಧಿ 4
9. ನದಿಯ ಮೇಲೆ ನೆಗೆಯುವ ಸ್ಪರ್ಧೆಯ ತೀರ್ಮಾನ ಅನಿಶ್ಚಿತ ಗೊಂದಲಕ್ಕೆ ಬಿದ್ದಿದೆ 4
11. ಸಿಹಿಯನ್ನು ಹಂಚುವಾಗ ಅದೇ ರುಚಿಯ ಹಾಡು 4
15. ತಬಲ ವಿದ್ವಾಂಸರ ನಡುವೆ ನುಡಿಸುವುದರಲ್ಲೇ ಸೆಣಸಾಟ 3
16. ಗುಣಾತಿಶಯಗಳನ್ನು ಹೊಂದಿರುವವರ ಎಣಿಕೆ ಕಾರ್ಯ 3
17. ಕಾರಿನಿಂದ ಇಳಿದೊಡನೆ ಕಂಡ ಪ್ರಾಣಿಯ ಬಣ್ಣ ಆನೆಯಂತೆ ಕಪ್ಪು 3

### ಮೇಲಿನಿಂದ ಕೆಳಕ್ಕೆ

1. ಆತನ ಸ್ವಂತದ ಗತಿ ಏನಾಗಿದೆ ಎಂಬುದರ ಸಮಾಚಾರ ಏನು? 3
2. ಪಯಣದ ಪಥವನ್ನು ಸೂಚಿಸಲಿಕ್ಕೆ ಈ ಬಾವುಟ 3
3. ಬಿರುಸಾದ ಗಾಳಿಯಲ್ಲಿ ತೇಲಿ ಬರುತ್ತಿದೆ ಸುಗಂಧ 3
5. ತುಂಡುಡುಗೆ ಧರಿಸಿ ಓಡಾಡುತ್ತಿದ್ದಾನೆ ಕಳ್ಳ 3
6. ಮುನಿಸನ್ನು ಬಿಟ್ಟೊಡನೆ ಮನಸಿನ ತುಂಬ ಸದಾ ಸಂತಸ 3
8. ಆಕೆಯ ನಮ್ರ ನಡವಳಿಕೆಗೆ ಗೌರವದ ನಮಸ್ಕಾರ 3
10. ತರುಗಳನ್ನೆಲ್ಲ ಕತ್ತರಿಸಿ ಹಾಕಿರುವ ಸೂಚನೆ ಕಾಣಿಸಿತೇ? 3
12. ಎಲ್ಲರೂ ವಿನೀತರಾಗಿ ವರ್ತಿಸಬೇಕೆಂದು ಒಂದು ಕೋರಿಕೆ 3
13. ಹುಡುಕಿದ ಬಳಿಕ ತಿಳಿಯಿತು, ಅವನೊಬ್ಬ ಎಳೇ ಹುಡುಗ 3
14. ಗೆದ್ದು ಬಂದವನಿಗೆ ಕೈ ತುಂಬ ದುಡ್ಡು ಕಾಸು 3

---

### 08–05–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂಧಾನ 3. ಆರಂಭ 4. ವೀಕ್ಷಿಸು 6. ವಸನ 7. ದಟ್ಟವನ 9. ಮಾಸಕಾಲ 11. ತಿರುಗಾಟ 13. ಕಲಾವಿದ 15. ಹವನ 17. ಲವಣ 18. ಲಿಖಿಸು 19. ತೆರವು

**ಮೇಲಿನಿಂದ ಕೆಳಕ್ಕೆ**

1. ಸಂಭವ 2. ನವೀನ 3. ಆಸವ 5. ಸುಹಾಸ 7. ದಳಪತಿ 8. ನದೀತಟ 9. ಮಾನಸಿಕ 10. ಲಕ್ಷ್ಮೀಪಾದ 12. ಗಾವಿಲ 14. ಲಾಲಿಸು 15. ಹಣತೆ 16. ನಲಿವು

ಪ್ರಶ್ನಾಂಕಣ

## ಅಮೆಜೋನಿಯಾ: ಏನೇನು ವಿಸ್ಮಯ?

ಅಮೆಜೋನಿಯಾ: ಅದು ಪೃಥ್ವಿಯ ಅತ್ಯಂತ ವಿಶಾಲ, ಅತ್ಯಂತ ಅದ್ಭುತ, ಅನನ್ಯ, ಅಸಾಮಾನ್ಯ ವೃಷ್ಟಿವನ. ಸುಮಾರು ಏಳು ದಶಲಕ್ಷ ಚದರ ಕಿ.ಮೀ. ವೈಶಾಲ್ಯದ (ನಮ್ಮ ಭಾರತ ದೇಶದ ಇಮ್ಮಡಿ ವಿಸ್ತಾರ) ಈ ವೃಷ್ಟಿವನ ದಕ್ಷಿಣ ಅಮೆರಿಕ ಖಂಡದಲ್ಲಿದೆ; ಅಲ್ಲಿನ ಎಂಟು ರಾಷ್ಟ್ರಗಳಿಗೆ (ಬ್ರೆಜಿಲ್, ಬೊಲಿವಿಯಾ, ಕೊಲಂಬಿಯಾ, ಈಕ್ವೆಡಾರ್, ಗಯಾನಾ, ಪೆರು, ವೆನಿಜೂಯೆಲಾ ಮತ್ತು ಸುರಿನೇಂ) ವ್ಯಾಪಿಸಿದೆ. ಧರೆಯ ಅತ್ಯಂತ ದೊಡ್ಡ, ಅತ್ಯಂತ ಉದ್ದ ಆಳ ಅಗಲಗಳ ಅಮೆಝಾನ್ ನದಿ ಇದೇ ವೃಷ್ಟಿವನದಲ್ಲೇ ಪ್ರವಹಿಸುತ್ತಿದೆ.

ಅಮೆಜೋನಿಯಾ ಪ್ರಸ್ತುತ ಭಾರೀ ದುರ್ದಸೆಯಲ್ಲಿದೆ ಕೂಡ. ಅದರ ಅತ್ಯಂತ ಇತ್ತೀಚಿನ ಪರಿಸ್ಥಿತಿಯನ್ನು ವಿಶ್ವಮಾನ್ಯ ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್‌ನ ಸಹಯೋಗದೊಡನೆ ನಡೆಸಿದ ಅಧ್ಯಯನ ವರದಿ 'ದಿ ಲಿವಿಂಗ್ ಅಮೆಜಾನ್ ರಿಪೋರ್ಟ್' ಅಮೆಜೋನಿಯಾದ ಅನನ್ಯ ವಿಸ್ಮಯಗಳನ್ನೂ ವಿವರಿಸಿದೆ. ಅದರಿಂದ ಆಯ್ದ ಮುಖ್ಯ ಅಂಶಗಳು:

- ಅಮೆಜೋನಿಯಾ ಗರಿಷ್ಠ ಸಸ್ಯ ಸಂಪದ್ಭರಿತ, ವೃಕ್ಷ ಸಂಪದ್ಭರಿತ ಕಾನನವಾಗಿದೆ. ಅಮೆಜೋನಿಯಾದಲ್ಲಿ ಇಪ್ಪತ್ತು ಸಾವಿರ ಪ್ರಭೇದಗಳ ಸುಮಾರು 390 ಶತಕೋಟಿ ವೃಕ್ಷಗಳಿವೆ! ಅಲ್ಲಿನ ವೃಕ್ಷ ದಟ್ಟಣೆ ಪ್ರತಿ ಹೆಕ್ಟೇರ್‌ಗೂ 300 ವೃಕ್ಷಗಳು!
- ಈ ವೃಕ್ಷ ಸಾಮ್ರಾಜ್ಯವನ್ನೂ, ಅಮೆಜಾನ್ ನದಿಯನ್ನೂ ಆಶ್ರಯಿಸಿ ಈವರೆಗೆ ಗುರುತಿಸಿರುವಂತೆ ಕನಿಷ್ಠ ಮೂವತ್ತು ಲಕ್ಷ ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿವೆ. ಅಮೆಜೋನಿಯಾದಲ್ಲೇ ಅಲ್ಲಲ್ಲಿ ಸುಮಾರು ಒಂದು ಲಕ್ಷ ಕಾಡು ಜನರೂ ನೆಲೆಸಿದ್ದಾರೆ!
- ಅಮೆಜೋನಿಯಾದ ವೃಕ್ಷಗಳು ಸುಮಾರು 120 ಶತಕೋಟಿ ಟನ್ ಇಂಗಾಲವನ್ನು ಹಿಡಿದಿಟ್ಟಿವೆ. ಈ ವೃಕ್ಷ ಸಾಮ್ರಾಜ್ಯವೇ ಧರೆಯ ವಾಯುಮಂಡಲದ ಒಟ್ಟು ಆಮ್ಲಜನಕದ ಶೇಕಡ 20 ಭಾಗವನ್ನು ದ್ಯುತಿಸಂಶ್ಲೇಷಣೆಯ ಮೂಲಕ ಉತ್ಪಾದಿಸುತ್ತಿದೆ! ಇದೇ ವೃಕ್ಷ ರಾಶಿಯಿಂದಲೇ ಭಾಷ್ಪವಿಸರ್ಜನೆಯ ಮೂಲಕ ಪ್ರತಿ ದಿನ ಇಪ್ಪತ್ತು ಶತಕೋಟಿ ಟನ್ ನೀರಾವಿ ವಾಯುಮಂಡಲಕ್ಕೆ ಸೇರ್ಪಡೆಯಾಗುತ್ತಿದೆ.
- ಅಮೆಜೋನಿಯಾ ಜಗತ್ತಿನ ಅತ್ಯಂತ ದೊಡ್ಡ ಔಷಧ ಭಂಡಾರವೂ ಆಗಿದೆ. ಧರೆಯ ಸಕಲ ಔಷಧೀಯ ಸಸ್ಯಗಳ ಶೇಕಡ 25 ಭಾಗ ಈ ವೃಷ್ಟಿವನದಲ್ಲೇ ಲಭಿಸುತ್ತಿದೆ!




- ವಿಪರ್ಯಾಸ ಏನೆಂದರೆ, ಇಂತಹ ಅಡವಿ ಸಾಮ್ರಾಜ್ಯ ಮನುಷ್ಯರ ಬಹುಮುಖ ದಾಳಿಗಳಿಂದಾಗಿ ಕುಸಿಯುತ್ತಿದೆ. ಕೃಷಿ ಭೂಮಿಗಾಗಿ, ಮರಮುಟ್ಟುಗಳಿಗಾಗಿ, ಗೋಮಾಳಗಳ ನಿರ್ಮಾಣಕ್ಕಾಗಿ, ಕೈಗಾರಿಕೆಗಳಿಗಾಗಿ, ಸೋಯಾ ಮತ್ತು ತಾಳೆ ಕೃಷಿಗಾಗಿ ಪ್ರತಿ ದಿನ ಸಾವಿರಾರು ಮಹಾ ವೃಕ್ಷಗಳು ಹನನಗೊಳ್ಳುತ್ತಿವೆ. ಎಂತಹ ದುರಂತ!

■ ಎನ್. ವಾಸುದೇವ್